# ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣ ಅಧಿನಿಯಮ, 1987

(1987 ರ ಅಧಿನಿಯಮ ಸಂಖ್ಯೆ 54)

**[9-5-2003ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 24ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 10ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ-I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ-II**

**ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸ್ಥಾಪನೆ ಮತ್ತು ಅದರ ನ್ಯಾಯಪೀಠಗಳು**

3. ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸ್ಥಾಪನೆ
4. ಕ್ಲೇಮುಗಳ ನ್ಯಾಯಾಧಿಕರಣ ಮತ್ತು ಅದರ ನ್ಯಾಯಪೀಠಗಳ ರಚನೆ
5. ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನಾಗಿ ನೇಮಕಗೊಳ್ಳಲು ಅರ್ಹತೆಗಳು
6. ಕೆಲವು ಸಂದರ್ಭಗಳಲ್ಲಿ ಉಪಾಧ್ಯಕ್ಷನು ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನೆರವೇರಿಸುವುದು
7. ಪದಾವಧಿ
8. ರಾಜೀನಾಮೆ ಮತ್ತು ತೆಗೆದುಹಾಕುವಿಕೆ
9. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ವೇತನಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು
10. ಅಧ್ಯಕ್ಷ, ಉಪಾಧ್ಯಕ್ಷ ಮುಂತಾದವರು ಹಾಗೆ ಅಧ್ಯಕ್ಷ, ಉಪಾಧ್ಯಕ್ಷ ಮುಂತಾದವರಾಗಿರುವುದು ನಿಂತುಹೋದ ಮೇಲೆ ಅವರು ಪದಧಾರಣ ಮಾಡುವ ಬಗ್ಗೆ ಉಪಬಂಧ
11. ಅಧ್ಯಕ್ಷನ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳು
12. ಕ್ಲೇಮುಗಳ ನ್ಯಾಯಾಧಿಕರಣದ ಸಿಬ್ಬಂದಿ

**ಅಧ್ಯಾಯ-III**

**ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ**

13. ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ
14. ನ್ಯಾಯಪೀಠಗಳೊಳಗೆ ವ್ಯವಹಾರದ ಹಂಚಿಕೆ

15. ಅಧಿಕಾರ ವ್ಯಾಪ್ತಿಯ ಪ್ರತಿಷೇಧ

## ಅಧ್ಯಾಯ-IV

## ಪ್ರಕ್ರಿಯೆ

16. ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಅರ್ಜಿ
17. ಕಾಲ ಪರಿಮಿತಿ
18. ಕ್ಲೇಮುಗಳ ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು
19. ಕಾನೂನು ಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು ಮತ್ತು ಪ್ರಸ್ತುತಪಡಿಸುವ ಅಧಿಕಾರಿಗಳು
20. ಒಂದು ನ್ಯಾಯಪೀಠದಿಂದ ಇನ್ನೊಂದು ನ್ಯಾಯಪೀಠಕ್ಕೆ ಪ್ರಕರಣಗಳನ್ನು ವರ್ಗಾಯಿಸಲು ಅಧ್ಯಕ್ಷನ ಅಧಿಕಾರ
21. ಬಹುಮತದ ಮೂಲಕ ತೀರ್ಮಾನ
22. ಕ್ಲೇಮುಗಳ ನ್ಯಾಯಾಧಿಕರಣದ ಆದೇಶಗಳ ಅಮಲ್ಜಾರಿ

## ಅಧ್ಯಾಯ-V

## ಅಪೀಲುಗಳು

23. ಅಪೀಲುಗಳು

## ಅಧ್ಯಾಯ-VI

## ಸಂಕೀರ್ಣ

24. ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆ
25. ಕ್ಲೇಮು ನ್ಯಾಯಾಧಿಕರಣದ ಮುಂದಿರುವ ಕಾನೂನು ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು
26. ಕ್ಲೇಮುಗಳ ನ್ಯಾಯಾಧಿಕರಣದ ಸದಸ್ಯರು ಮತ್ತು ಸಿಬ್ಬಂದಿಯು ಲೋಕ ನೌಕರರಾಗಿರುವುದು
27. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
28. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು
29. ತೊಂದರೆಗಳ ನಿವಾರಣಾಧಿಕಾರ
30. ನಿಯಮ ರಚನಾಧಿಕಾರ
30ಎ. ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ಅಧಿಕಾರ

# ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣ ಅಧಿನಿಯಮ, 1987

(ಅಧಿನಿಯಮ ಸಂಖ್ಯೆ 1987ರ 54)

[ಡಿಸೆಂಬರ್ 23, 1987]

ರೈಲ್ವೆಯ ಮೂಲಕ ಸಾಗಣೆ ಮಾಡಲು ಅದಕ್ಕೆ ವಹಿಸಿಕೊಟ್ಟಿರುವ ಪ್ರಾಣಿಗಳ ಅಥವಾ ಸರಕುಗಳ ನಷ್ಟ, ನಾಶ, ಹಾನಿ, ಇಳಿಗತಿಯ ಬಗ್ಗೆ ಅಥವಾ ಅವುಗಳನ್ನು ವಶಾವಣೆ ಮಾಡದಿರುವ ಬಗ್ಗೆ ಅಥವಾ ದರಗಳ ಅಥವಾ ಸಾಗಣೆ ವೆಚ್ಚದ ಮರು ಪಾವತಿಯ ಬಗ್ಗೆ, ಅಥವಾ ರೈಲ್ವೆ ಅಪಘಾತಗಳ ಅಥವಾ ಅಹಿತಕರ ಘಟನೆಗಳ ಕಾರಣದಿಂದಾಗಿ ಸಂಭವಿಸುವ ಪ್ರಯಾಣಿಕರ ಸಾವು ಅಥವಾ ಕ್ಷತಿಯ ಬಗ್ಗೆ ರೈಲ್ವೆ ಆಡಳಿತದ ವಿರುದ್ಧದ ಕ್ಲೇಮುಗಳನ್ನು ವಿಚಾರಣೆ ಮಾಡಲು ಮತ್ತು ನಿರ್ಧರಿಸಲು ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

## ಅಧ್ಯಾಯ–I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– 1) ಈ ಅಧಿನಿಯಮವನ್ನು ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣ ಅಧಿನಿಯಮ, 1987 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅರ್ಜಿ" ಎಂದರೆ 16ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿ;

(ಬಿ) "ಗೊತ್ತುಪಡಿಸಲಾದ ದಿನ" ಎಂದರೆ 3ನೇ ಪ್ರಕರಣದ ಮೇರೆಗೆ ಯಾವ ದಿನಾಂಕದಿಂದ ಜಾರಿಗೆ ಬರುವಂತೆ ಕ್ಲೇಮುಗಳ ನ್ಯಾಯಾಧಿಕರಣವನ್ನು ಸ್ಥಾಪಿಸಲಾಗುವುದೋ ಆ ದಿನಾಂಕ;

(ಸಿ) "ನ್ಯಾಯಪೀಠ" ಎಂದರೆ ಕ್ಲೇಮುಗಳ ನ್ಯಾಯಾಧಿಕರಣದ ನ್ಯಾಯಪೀಠ;

(ಡಿ) "ಅಧ್ಯಕ್ಷ" ಎಂದರೆ ಕ್ಲೇಮುಗಳ ನ್ಯಾಯಾಧಿಕರಣದ ಅಧ್ಯಕ್ಷ;

(ಇ) "ಕ್ಲೇಮುಗಳ ನ್ಯಾಯಾಧಿಕರಣ" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣ;

(ಎಫ್) "ನ್ಯಾಯಿಕ ಸದಸ್ಯ" ಎಂದರೆ ಈ ಅಧಿನಿಯಮದ ಮೇರೆಗೆ ನ್ಯಾಯಿಕ ಸದಸ್ಯನೆಂದು ನೇಮಿಸಲಾದ ಕ್ಲೇಮುಗಳ ನ್ಯಾಯಾಧಿಕರಣದ ಸದಸ್ಯ, ಮತ್ತು ಇದು, 5ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುವೇ ಅರ್ಹತೆಗಳನ್ನು ಹೊಂದಿರುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಜಿ) "ಸದಸ್ಯ" ಎಂದರೆ ಕ್ಲೇಮುಗಳ ನ್ಯಾಯಾಧಿಕರಣದ (ನ್ಯಾಯಿಕ ಅಥವಾ ತಾಂತ್ರಿಕ) ಸದಸ್ಯ ಮತ್ತು ಇದು ಅಧ್ಯಕ್ಷ ಹಾಗೂ ಉಪಾಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಹೆಚ್) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಐ) "ನಿಯಮಿಸಲಾದುದು" ಎಂದರೆ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆ) "ರೈಲ್ವೆಗಳ ಅಧಿನಿಯಮ" ಎಂದರೆ ಭಾರತೀಯ ರೈಲ್ವೆ ಅಧಿನಿಯಮ, 1890 (1890ರ 9);

(ಕೆ) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು;

(ಎಲ್) "ತಾಂತ್ರಿಕ ಸದಸ್ಯ" ಎಂದರೆ ನ್ಯಾಯಿಕ ಸದಸ್ಯನಲ್ಲದ ಕ್ಲೇಮು ನ್ಯಾಯಾಧಿಕರಣದ ಸದಸ್ಯ, ಮತ್ತು 5ನೇ ಪ್ರಕರಣದ (4) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುವೇ ಅರ್ಹತೆಯನ್ನು ಹೊಂದಿರುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಎಮ್) "ಉಪಾಧ್ಯಕ್ಷ" ಎಂದರೆ ಕ್ಲೇಮುಗಳ ನ್ಯಾಯಾಧಿಕರಣದ ಉಪಾಧ್ಯಕ್ಷ.

ವಿವರಣೆ:- ಈ ಅಧಿನಿಯಮದಲ್ಲಿ ಉಪಾಧ್ಯಕ್ಷನ ಬಗೆಗಿನ ಉಲ್ಲೇಖಗಳನ್ನು ಪ್ರತಿಯೊಬ್ಬ ಉಪಾಧ್ಯಕ್ಷನ ಬಗೆಗಿನ ಉಲ್ಲೇಖಗಳೆಂದು ಅರ್ಥೈಸತಕ್ಕುದು;

(ಎನ್) "ಅಹಿತಕರ ಘಟನೆ" ಎಂಬ ಪದವು ರೈಲ್ವೆ ಅಧಿನಿಯಮ, 1989 (1989ರ 24)ರ 123ನೇ ಪ್ರಕರಣದ (ಸಿ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದತಕ್ಕದ್ದು.

(ಓ) ಈ ಅಧಿನಿಯಮದಲ್ಲಿ ಬಳಸಲಾದ ಮತ್ತು ಪರಿಭಾಷಿಸಿರದ ಆದರೆ ರೈಲ್ವೆ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅಥವಾ ಸದರಿ ನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕುದು.

## ಅಧ್ಯಾಯ-II

## ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸ್ಥಾಪನೆ ಮತ್ತು ಅದರ ನ್ಯಾಯಪೀಠಗಳು

**3. ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸ್ಥಾಪನೆ.-** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣವೆಂದು ಕರೆಯಲಾಗುವ ಕ್ಲೇಮುಗಳ ನ್ಯಾಯಾಧಿಕರಣವನ್ನು ಸ್ಥಾಪಿಸತಕ್ಕುದು. ಆ ನ್ಯಾಯಾಧಿಕರಣವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ಪ್ರದಾನ ಮಾಡಲಾಗಿರುವ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕುದು.

**4. ಕ್ಲೇಮುಗಳ ನ್ಯಾಯಾಧಿಕರಣ ಮತ್ತು ಅದರ ನ್ಯಾಯಪೀಠಗಳ ರಚನೆ.-** (1) ಕ್ಲೇಮುಗಳ ನ್ಯಾಯಾಧಿಕರಣವು, ಅಧ್ಯಕ್ಷ, ನಾಲ್ವರು ಉಪಾಧ್ಯಕ್ಷರು ಮತ್ತು ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ನ್ಯಾಯಿಕ ಸದಸ್ಯರು ಮತ್ತು ತಾಂತ್ರಿಕ ಸದಸ್ಯರಿಂದ ಕೂಡಿರತಕ್ಕುದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಅದರ ನ್ಯಾಯಪೀಠಗಳು ಚಲಾಯಿಸಬಹುದು.

(2) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ಒಂದು ನ್ಯಾಯಪೀಠವು, ಒಬ್ಬ ನ್ಯಾಯಿಕ ಸದಸ್ಯ ಮತ್ತು ಒಬ್ಬ ತಾಂತ್ರಿಕ ಸದಸ್ಯರಿಂದ ಕೂಡಿರತಕ್ಕುದು.

(3) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಧ್ಯಕ್ಷನು,-

(ಎ) ತನ್ನನ್ನು ನೇಮಕ ಮಾಡಲಾಗಿರುವ ನ್ಯಾಯಪೀಠದ ನ್ಯಾಯಿಕ ಸದಸ್ಯ ಅಥವಾ ತಾಂತ್ರಿಕ ಸದಸ್ಯನ ಪ್ರಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ, ಅವನು ಸಂದರ್ಭಾನುಸಾರ ಯಾವುದೇ ಇತರ ನ್ಯಾಯಪೀಠದ ನ್ಯಾಯಿಕ ಸದಸ್ಯನ ಅಥವಾ ತಾಂತ್ರಿಕ ಸದಸ್ಯನ ಪ್ರಕಾರ್ಯಗಳನ್ನು ನಿರ್ವಹಿಸಬಹುದು;

(ಬಿ) ಒಬ್ಬ ಉಪಾಧ್ಯಕ್ಷ ಅಥವಾ ಇತರ ಸದಸ್ಯನನ್ನು ಒಂದು ನ್ಯಾಯಪೀಠದಿಂದ ಇನ್ನೊಂದು ನ್ಯಾಯಪೀಠಕ್ಕೆ ವರ್ಗಾಯಿಸಬಹುದು;

(ಸಿ) ಒಂದು ನ್ಯಾಯ ಪೀಠಕ್ಕೆ ನೇಮಕ ಮಾಡಲಾಗಿರುವ ಉಪಾಧ್ಯಕ್ಷ ಅಥವಾ ನ್ಯಾಯಿಕ ಸದಸ್ಯನನ್ನು ಅಥವಾ ತಾಂತ್ರಿಕ ಸದಸ್ಯನನ್ನು, ಸಂದರ್ಭಾನುಸಾರ ಇನ್ನೊಂದು ನ್ಯಾಯಪೀಠದ ಉಪಾಧ್ಯಕ್ಷನ ಅಥವಾ ನ್ಯಾಯಿಕ ಸದಸ್ಯನ ಅಥವಾ ತಾಂತ್ರಿಕ ಸದಸ್ಯನ ಪ್ರಕಾರ್ಯವನ್ನು ಸಹ ನಿರ್ವಹಿಸಲು ಅಧಿಕೃತಗೊಳಿಸಬಹುದು.

(4) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಧ್ಯಕ್ಷನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನು ಏಕ ಸದಸ್ಯನಿಂದ ಕೂಡಿದ ನ್ಯಾಯ ಪೀಠವಾಗಿ ಕಾರ್ಯನಿರ್ವಹಿಸಲು ಮತ್ತು ಅಧ್ಯಕ್ಷನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಮೊಕದ್ದಮೆಗಳ ವರ್ಗಗಳ ಅಥವಾ ಅಂಥ ಮೊಕದ್ದಮೆಗಳ ವರ್ಗಗಳಿಗೆ ಸಂಬಂಧಿಸಿದಂಥ ವಿಷಯಗಳ ಸಂಬಂಧದಲ್ಲಿ ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸಲು ಸಕ್ಷಮನಾಗಿರತಕ್ಕದ್ದು:

ಪರಂತು, ಯಾವುದೇ ಅಂಥ ಮೊಕದ್ದಮೆಯ ಅಥವಾ ವಿಷಯದ ಸುನಾವಣೆಯ ಯಾವುದೇ ಹಂತದಲ್ಲಿ ಆ ಮೊಕದ್ದಮೆಯು ಅಥವಾ ವಿಷಯವು ಇಬ್ಬರು ಸದಸ್ಯರಿಂದ ಕೂಡಿದ ಒಂದು ನ್ಯಾಯಪೀಠವು ಸುನಾವಣೆ ಮಾಡಬೇಕಾದಂಥ ಸ್ವರೂಪದ್ದಾಗಿದೆ ಎಂದು ಅಧ್ಯಕ್ಷನಿಗೆ ಅಥವಾ ಅಂಥ ಸದಸ್ಯನಿಗೆ ಕಂಡುಬಂದರೆ ಆ ಮೊಕದ್ದಮೆಯನ್ನು ಅಥವಾ ವಿಷಯವನ್ನು ಸಂದರ್ಭಾನುಸಾರ ಅಧ್ಯಕ್ಷನು ತಾನು ಸೂಕ್ತವೆಂದು ಭಾವಿಸಬಹುದಾದಂಥ ನ್ಯಾಯಪೀಠಕ್ಕೆ ವರ್ಗಾಯಿಸಬಹುದು ಅಥವಾ ಹಾಗೆ ವರ್ಗಾಯಿಸಲು ಅದನ್ನು ಅಧ್ಯಕ್ಷನಿಗೆ ಕಳಿಸಿಕೊಡಬಹುದು.

(5) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ನ್ಯಾಯಪೀಠಗಳು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ ಉಪವೇಶನ ನಡೆಸತಕ್ಕದ್ದು.

**5. ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನಾಗಿ ನೇಮಕಗೊಳ್ಳಲು ಅರ್ಹತೆಗಳು.–** (1) ಒಬ್ಬ ವ್ಯಕ್ತಿಯು–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು; ಅಥವಾ

(ಬಿ) ಕನಿಷ್ಠ ಎರಡು ವರ್ಷಗಳವರೆಗೆ ಉಪಾಧ್ಯಕ್ಷನ ಪದಧಾರಣ ಮಾಡಿರುವ ಹೊರತು

– ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(2) ಒಬ್ಬ ವ್ಯಕ್ತಿಯು–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿರುವ ಹೊರತು; ಅಥವಾ

(ಬಿ) ಭಾರತೀಯ ಕಾನೂನು ಸೇವೆಯ ಸದಸ್ಯನಾಗಿದ್ದ ಹೊರತು ಮತ್ತು ಕನಿಷ್ಠ ಐದು ವರ್ಷಗಳವರೆಗೆ ಆ ಸೇವೆಯ ಮೊದಲ ದರ್ಜೆಯ ಪದಧಾರಣವನ್ನು ಅಥವಾ ಯಾವುದೇ ಉನ್ನತ ಪದಧಾರಣವನ್ನು ಮಾಡಿರುವ ಹೊರತು; ಅಥವಾ

(ಸಿ) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯನ್ನು ಹೊಂದಿರುವ ಸಿವಿಲ್ ನ್ಯಾಯಿಕ ಪದವನ್ನು ಕನಿಷ್ಠ ಐದು ವರ್ಷಗಳವರೆಗೆ ಧಾರಣ ಮಾಡಿರುವ ಹೊರತು; ಅಥವಾ

(ಡಿ) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯ ಪದವನ್ನು ರೈಲ್ವೆ ಆಡಳಿತದಲ್ಲಿ ಕನಿಷ್ಠ ಐದು ವರ್ಷಗಳವರೆಗೆ ಧಾರಣ ಮಾಡಿರುವ ಹೊರತು ಮತ್ತು ರೈಲ್ವೆಗೆ ಸಂಬಂಧಪಟ್ಟ ಕ್ಲೇಮುಗಳು ಹಾಗೂ ವಾಣಿಜ್ಯ ವಿಷಯಗಳ ಬಗೆಗಿನ ನಿಯಮಗಳು ಹಾಗೂ ಪ್ರಕ್ರಿಯೆಯ ಬಗ್ಗೆ ಸಾಕಷ್ಟು ತಿಳುವಳಿಕೆ ಮತ್ತು ಅನುಭವವನ್ನು ಹೊಂದಿರುವ ಹೊರತು; ಅಥವಾ

(ಇ) ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಯವರೆಗೆ ನ್ಯಾಯಿಕ ಸದಸ್ಯನಾಗಿ ಅಥವಾ ತಾಂತ್ರಿಕ ಸದಸ್ಯನಾಗಿ ಪದಧಾರಣ ಮಾಡಿರುವ ಹೊರತು

– ಉಪಾಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕುದಲ್ಲ.

(3) ಒಬ್ಬ ವ್ಯಕ್ತಿಯು,–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿರುವ ಹೊರತು; ಅಥವಾ

(ಬಿ) ಭಾರತೀಯ ಕಾನೂನು ಸೇವೆಯ ಸದಸ್ಯನಾಗಿದ್ದ ಹೊರತು ಮತ್ತು ಆ ಸೇವೆಯ ಮೊದಲ ದರ್ಜೆಯ ಪದವನ್ನು ಕನಿಷ್ಠ ಮೂರು ವರ್ಷಗಳವರೆಗೆ ಧಾರಣ ಮಾಡಿರುವ ಹೊರತು; ಅಥವಾ

(ಸಿ) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ಸಿವಿಲ್ ನ್ಯಾಯಿಕ ಪದವನ್ನು ಕನಿಷ್ಠಪಕ್ಷ ಮೂರು ವರ್ಷಗಳವರೆಗೆ ಧಾರಣ ಮಾಡಿರುವ ಹೊರತು

– ನ್ಯಾಯಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕುದಲ್ಲ.

(4) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯ ಪದವನ್ನು ರೈಲ್ವೆ ಆಡಳಿತದಲ್ಲಿ ಕನಿಷ್ಠಪಕ್ಷ ಮೂರು ವರ್ಷಗಳವರೆಗೆ ಧಾರಣ ಮಾಡಿರುವ ಹೊರತು, ಮತ್ತು ರೈಲ್ವೆಗೆ ಸಂಬಂಧಪಟ್ಟ ಕ್ಲೇಮುಗಳು ಮತ್ತು ವಾಣಿಜ್ಯ ವಿಷಯಗಳ ಬಗೆಗಿನ ನಿಯಮಗಳು ಮತ್ತು ಪ್ರಕ್ರಿಯೆಯ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನು ಮತ್ತು ಅದರಲ್ಲಿ ಅನುಭವವನ್ನು ಹೊಂದಿರುವ ಹೊರತು ತಾಂತ್ರಿಕ ಸದಸ್ಯನೆಂದು ನೇಮಕಗೊಳ್ಳಲು ಅರ್ಹನಾಗತಕ್ಕುದಲ್ಲ.

(5) (6)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ರಾಷ್ಟ್ರಪತಿಯು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು ನೇಮಕಮಾಡತಕ್ಕುದು.

(6) ಭಾರತದ ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿದ ತರುವಾಯ ಹೊರತು ಅಧ್ಯಕ್ಷನಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡತಕ್ಕುದಲ್ಲ.

**6. ಕೆಲವು ಸಂದರ್ಭಗಳಲ್ಲಿ ಉಪಾಧ್ಯಕ್ಷನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನೆರವೇರಿಸುವುದು.–** (1) ಅಧ್ಯಕ್ಷನ ಮರಣದಿಂದ, ರಾಜೀನಾಮೆಯಿಂದ ಅಥವಾ ಅನ್ಯಥಾ ಅವನ ಹುದ್ದೆಯು ಯಾವುದೇ ರೀತಿಯಲ್ಲಿ ಖಾಲಿಯಾದ ಸಂದರ್ಭದಲ್ಲಿ, ಈ

ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ ಉಪಾಧ್ಯಕ್ಷರಲ್ಲಿ ಒಬ್ಬನು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ನೇಮಕ ಮಾಡಲಾಗುವ ಹೊಸ ಅಧ್ಯಕ್ಷನು ತನ್ನ ಪದವನ್ನು ವಹಿಸಿಕೊಳ್ಳುವ ದಿನಾಂಕದವರೆಗೆ ಅಧ್ಯಕ್ಷನೆಂದು ಕಾರ್ಯನಿರ್ವಹಿಸತಕ್ಕದ್ದು.

(2) ಅಧ್ಯಕ್ಷನು ಗೈರುಹಾಜರಿ, ಕಾಯಿಲೆ ಅಥವಾ ಇತರ ಯಾವುದೇ ಕಾರಣದಿಂದ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ, ಉಪಾಧ್ಯಕ್ಷರಲ್ಲಿ ಒಬ್ಬನು, ಅಧ್ಯಕ್ಷನು ತನ್ನ ಕರ್ತವ್ಯಗಳನ್ನು ಮತ್ತೆ ವಹಿಸಿಕೊಳ್ಳುವ ದಿನಾಂಕದವರೆಗೆ ಅಧ್ಯಕ್ಷನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**7. ಪದಾವಧಿ.–** ಅಧ್ಯಕ್ಷ, ಉಪಾಧ್ಯಕ್ಷ, ಅಥವಾ ಇತರ ಸದಸ್ಯನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ, ಅಥವಾ–

(ಎ) ಅಧ್ಯಕ್ಷನ ಸಂದರ್ಭದಲ್ಲಿ ಅವನಿಗೆ ಅರವತ್ತೈದು ವರ್ಷ ವಯಸ್ಸಾಗುವವರೆಗೆ; ಮತ್ತು

(ಬಿ) ಉಪಾಧ್ಯಕ್ಷನ ಅಥವಾ ಯಾವನೇ ಇತರ ಸದಸ್ಯನ ಸಂದರ್ಭದಲ್ಲಿ ಅವನಿಗೆ ಅರವತ್ತೆರಡು ವರ್ಷ ವಯಸ್ಸಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅವನು ತನ್ನ ಪದಧಾರಣ ಮಾಡಿರತಕ್ಕದ್ದು.

**8. ರಾಜೀನಾಮೆ ಮತ್ತು ತೆಗೆದುಹಾಕುವಿಕೆ.–** (1) ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು ರಾಷ್ಟ್ರಪತಿಯನ್ನು ಸಂಬೋಧಿಸಿದ ತನ್ನ ಸಹಿ ಇರುವ ಲಿಖಿತ ನೋಟೀಸು ಮೂಲಕ ತನ್ನ ಪದಕ್ಕೆ ರಾಜೀನಾಮೆಯನ್ನು ನೀಡಬಹುದು:

ಪರಂತು, ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು ತನ್ನ ಪದವನ್ನು ಕೂಡಲೇ ತ್ಯಜಿಸಲು ರಾಷ್ಟ್ರಪತಿಯು ಅನುಮತಿಸಿರುವ ಹೊರತು, ಅವನು ಅಂಥ ನೋಟೀಸು ತಲುಪಿದ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾಗುವವರೆಗೆ ಅಥವಾ ತನ್ನ ಉತ್ತರಾಧಿಕಾರಿಯಾಗಿ ಯುಕ್ತವಾಗಿ ನೇಮಕವಾದ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ತನ್ನ ಪದಾವಧಿಯು ಮುಕ್ತಾಯಗೊಳ್ಳುವವರೆಗೆ ಇವುಗಳಲ್ಲಿ ಯಾವುದು ಅತಿ ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡಿರುವುದು ಮುಂದುವರಿಯತಕ್ಕದ್ದು.

(2) ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನಿಗೆ ಅವನ ವಿರುದ್ಧ ಇರುವ ಆರೋಪಗಳನ್ನು ತಿಳಿಸಿ ಮತ್ತು ಆ ಆರೋಪಗಳ ಸಂಬಂಧದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟು ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶನು ವಿಚಾರಣೆ ನಡೆಸಿದ ತರುವಾಯ ರುಜುವಾತಾದ ದುರ್ವರ್ತನೆ ಅಥವಾ ಅಸಮರ್ಥತೆಯ ಆಧಾರದ ಮೇಲೆ ರಾಷ್ಟ್ರಪತಿಯು ಮಾಡಿದ ಆದೇಶದ ಮೂಲಕ ಹೊರತು ಅಂಥ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಯಾವನೇ ಇತರ ಸದಸ್ಯನನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನ ದುರ್ವರ್ತನೆ ಅಥವಾ ಅಸಮರ್ಥತೆಯ ತನಿಖೆಗಾಗಿ ಪ್ರಕ್ರಿಯೆಯನ್ನು ನಿಯಮಗಳ ಮೂಲಕ ವಿನಿಯಮಿಸಬಹುದು.

**9. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ವೇತನಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು.–** ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು (ನಿವೃತ್ತಿ ವೇತನ, ಉಪದಾನ

ಮತ್ತು ಇತರ ನಿವೃತ್ತಿಯ ಪ್ರಯೋಜನಗಳು ಸೇರಿದಂತೆ) ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು:

ಪರಂತು, ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನ ವೇತನ ಮತ್ತು ಭತ್ಯೆಗಳನ್ನಾಗಲಿ, ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳನ್ನಾಗಲೀ ಅವರ ನೇಮಕಾತಿಯ ತರುವಾಯ ಅವರಿಗೆ ಅನನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕುದಲ್ಲ.

**10. ಅಧ್ಯಕ್ಷ, ಉಪಾಧ್ಯಕ್ಷ ಮುಂತಾದವರು ಹಾಗೆ ಅಧ್ಯಕ್ಷ, ಉಪಾಧ್ಯಕ್ಷ ಮುಂತಾದವರಾಗಿರುವುದು ನಿಂತುಹೋದ ಮೇಲೆ ಅವರು ಪದಧಾರಣ ಮಾಡುವ ಬಗ್ಗೆ ಉಪಬಂಧ.–** ಪದಧಾರಣ ಮಾಡಿರುವುದು ನಿಂತುಹೋದ ಮೇಲೆ–

(ಎ) ಕ್ಲೇಮುಗಳ ನ್ಯಾಯಾಧಿಕರಣದ ಅಧ್ಯಕ್ಷನು ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಮತ್ತೆ ನಿಯೋಜನೆಗೆ ಅರ್ಹನಾಗತಕ್ಕುದಲ್ಲ.

(ಬಿ) ಉಪಾಧ್ಯಕ್ಷನು, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ಕ್ಲೇಮುಗಳ ನ್ಯಾಯಾಧಿಕರಣದ ಅಧ್ಯಕ್ಷನಾಗಿ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿಸಲಾದ ಯಾವುದೇ ಇತರ ನ್ಯಾಯಾಧಿಕರಣದ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕುದು; ಆದರೆ ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಯಾವುದೇ ಇತರ ನಿಯೋಜನೆಗೆ ಅರ್ಹನಾಗತಕ್ಕುದಲ್ಲ.

(ಸಿ) ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲದ ಒಬ್ಬ ಸದಸ್ಯನು ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿಸಲಾದ ಯಾವುದೇ ಇತರ ನ್ಯಾಯಾಧಿಕರಣದ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕುದು, ಆದರೆ ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಯಾವುದೇ ಇತರ ನಿಯೋಜನೆಗೆ ಅರ್ಹನಾಗತಕ್ಕುದಲ್ಲ.

(ಡಿ) ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನು ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ಹಾಜರಾಗತಕ್ಕುದಲ್ಲ, ಕಾರ್ಯನಿರ್ವಹಿಸತಕ್ಕುದಲ್ಲ ಅಥವಾ ವಾದಿಸತಕ್ಕುದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, ಭಾರತ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ನಿಯೋಜನೆ ಎಂಬುದು, ಭಾರತದ ರಾಜ್ಯ ಕ್ಷೇತ್ರದೊಳಗಿನ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದಲ್ಲಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮ ಅಥವಾ ಸಂಘದಲ್ಲಿರುವ ನಿಯೋಜನೆಯನ್ನು ಒಳಗೊಳ್ಳುತ್ತದೆ.

**11. ಅಧ್ಯಕ್ಷನ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳು.–** ಅಧ್ಯಕ್ಷನು, ನಿಯಮಗಳ ಮೇರೆಗೆ ತನ್ನಲ್ಲಿ ನಿಹಿತಗೊಳಿಸಬಹುದಾದಂಥ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ನ್ಯಾಯಪೀಠಗಳ ಮೇಲೆ ಚಲಾಯಿಸತಕ್ಕುದು:

ಪರಂತು, ಅಧ್ಯಕ್ಷನು ತನ್ನ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳ ಪೈಕಿ ತಾನು ಸೂಕ್ತವೆಂದು ಯೋಚಿಸಬಹುದಾದಂಥವುಗಳನ್ನು ಕ್ಲೇಮುಗಳ ನ್ಯಾಯಾಧಿಕರಣದ ಉಪಾಧ್ಯಕ್ಷನಿಗೆ ಅಥವಾ ಯಾರೇ ಇತರ ಅಧಿಕಾರಿಗೆ ಪ್ರತ್ಯಾಯೋಜಿಸಲು ಅಧಿಕಾರ ಹೊಂದಿರತಕ್ಕುದು; ಈ ಪ್ರತ್ಯಾಯೋಜನೆಯು, ಆ ಉಪಾಧ್ಯಕ್ಷನು ಅಥವಾ ಅಂಥ ಅಧಿಕಾರಿಯು, ಅಂಥ ಪ್ರತ್ಯಾಯೋಜಿತ ಅಧಿಕಾರಗಳನ್ನು ಚಲಾಯಿಸುವಾಗ ಅಧ್ಯಕ್ಷನ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಮೇರೆಗೆ ಕಾರ್ಯನಿರ್ವಹಿಸುವುದನ್ನು ಮುಂದುವರಿಸತಕ್ಕುದೆಂಬ ಷರತ್ತಿಗೆ ಒಳಪಟ್ಟಿರುವುದು.

**12. ಕ್ಲೇಮುಗಳ ನ್ಯಾಯಾಧಿಕರಣದ ಸಿಬ್ಬಂದಿ.-** (1) ಕ್ಲೇಮು ನ್ಯಾಯಾಧಿಕರಣವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ನೆರವು ನೀಡಲು ಅಗತ್ಯವಾದ ಅಧಿಕಾರಿಗಳು ಮತ್ತು ಇತರ ನೌಕರರ ಸ್ವರೂಪ ಹಾಗೂ ಪ್ರವರ್ಗಗಳನ್ನು ಕೇಂದ್ರ ಸರ್ಕಾರವು, ನಿರ್ಧರಿಸತಕ್ಕುದು ಮತ್ತು ತಾನು ಸೂಕ್ತವೆಂದು ಯೋಚಿಸಬಹುದಾದಂಥ ಅಧಿಕಾರಿಗಳು ಹಾಗೂ ಇತರ ನೌಕರರನ್ನು ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಒದಗಿಸತಕ್ಕುದು.

(2) ಕ್ಲೇಮು ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ಇತರ ನೌಕರರು ಅಧ್ಯಕ್ಷರ ಸಾಮಾನ್ಯ ಅಧೀಕ್ಷಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(3) ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ಇತರ ನೌಕರರ ವೇತನಗಳು, ಭತ್ಯಗಳು ಮತ್ತು ಅವರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು.

## ಅಧ್ಯಾಯ-III

## ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ

**13. ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ.-** (1) ಕ್ಲೇಮುಗಳ ನ್ಯಾಯಾಧಿಕರಣವು ಗೊತ್ತುಪಡಿಸಲಾದ ದಿನದಂದು ಮತ್ತು ಆ ದಿನದಿಂದ ಯಾವುದೇ ಸಿವಿಲ್ ನ್ಯಾಯಾಲಯವು ಅಥವಾ ರೈಲ್ವೆ ಅಧಿನಿಯಮದ ಉಪಬಂಧಗಳ ಮೇರೆಗೆ ನೇಮಕಗೊಂಡ ಕ್ಲೇಮುಗಳ ಕಮೀಷನರನು ಆ ದಿನದ ನಿಕಟಪೂರ್ವದಲ್ಲಿ ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ ಚಲಾಯಿಸುತ್ತಿದ್ದಂಥ ಎಲ್ಲ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕುದು,-

(ಎ) (i) ರೈಲ್ವೆ ಮೂಲಕ ಸಾಗಣೆಗಾಗಿ ರೈಲ್ವೆ ಆಡಳಿತಕ್ಕೆ ವಹಿಸಿಕೊಟ್ಟ ಪ್ರಾಣಿಗಳ ಅಥವಾ ಸರಕುಗಳ ನಷ್ಟ, ನಾಶ, ಹಾನಿ, ಇಳಿಗತಿಯ ಬಗ್ಗೆ ಅಥವಾ ಅವುಗಳನ್ನು ವಶಾವಣೆ ಮಾಡದಿರುವ ಬಗ್ಗೆ ನಷ್ಟಪರಿಹಾರ;

(ii) ರೈಲ್ವೆ ಅಧಿನಿಯಮದ 82ಎ ಪ್ರಕರಣದ ಮೇರೆಗೆ ಅಥವಾ ಆ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಸಂದಾಯ ಮಾಡಬೇಕಾದ ಪರಿಹಾರ

- ಇವುಗಳ ಬಗೆಗಿನ ಕ್ಲೇಮುಗಳ ಸಂಬಂಧದಲ್ಲಿ ರೈಲ್ವೆ ಅಧಿನಿಯಮದ VIIನೇ ಅಧ್ಯಾಯದ ಮೇರೆಗೆ ವಾಹಕರಾಗಿ ರೈಲ್ವೆ ಆಡಳಿತಗಳ ಜವಾಬ್ದಾರಿಗೆ ಸಂಬಂಧಪಟ್ಟ ವಿಷಯ; ಮತ್ತು

(ಬಿ) ದರಗಳ ಅಥವಾ ಅವುಗಳ ಭಾಗದ ಮರುಪಾವತಿಗಾಗಿನ ಅಥವಾ ರೈಲ್ವೆಯ ಮೂಲಕ ಸಾಗಣೆಗಾಗಿ ರೈಲ್ವೆ ಆಡಳಿತಕ್ಕೆ ವಹಿಸಿಕೊಟ್ಟ ಪ್ರಾಣಿಗಳ, ಅಥವಾ ಸರಕುಗಳ ಸಂಬಂಧದಲ್ಲಿ ಸಂದಾಯ ಮಾಡಿದ ಯಾವುದೇ ಸಾಗಣೆ ವೆಚ್ಚದ ಮರುಪಾವತಿಗಾಗಿನ ಕ್ಲೇಮುಗಳಿಗೆ ಸಂಬಂಧಪಟ್ಟ ವಿಷಯ.

(1ಎ) ಕ್ಲೇಮುಗಳ ನ್ಯಾಯಾಧಿಕಾರವು, ರೈಲ್ವೆ ಅಧಿನಿಯಮ, 1989 (1989ರ 24) 124ಎ ಪ್ರಕರಣದ ಉಪಬಂಧಗಳ ಪ್ರಾರಂಭದ ದಿನಾಂಕದಂದು ಮತ್ತು ಆ ದಿನಾಂಕದಿಂದ ಸದರಿ ಅಧಿನಿಯಮದ 124ಎ ಪ್ರಕರಣದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ರೈಲ್ವೆ ಆಡಳಿತವು ಸದ್ಯದಲ್ಲಿ ಸಂದಾಯ ಮಾಡಬೇಕಾದ ಪರಿಹಾರದ ಕ್ಲೇಮುಗಳಿಗೆ ಸಂಬಂಧಿಸಿದಂತೆ, ಯಾವುದೇ ಸಿವಿಲ್ ನ್ಯಾಯಾಲಯವು ಆ ದಿನಾಂಕದ ನಿಕಟಪೂರ್ವದಲ್ಲಿ ಚಲಾಯಿಸುತ್ತಿದ್ದಂಥ ಎಲ್ಲಾ ಅಧಿಕಾರವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನೂ ಕೂಡ ಚಲಾಯಿಸತಕ್ಕದ್ದು;

(2) ರೈಲ್ವೆ ಅಧಿನಿಯಮ, 1989 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಈ ಅಧಿನಿಯಮದ ಮೇರೆಗೆ ಕ್ಲೇಮುಗಳ ನ್ಯಾಯಾಧಿಕರಣವು ಯಾವುವೇ ಕ್ಲೇಮುಗಳನ್ನು ವಿಚಾರಣೆ ಮಾಡುವುದಕ್ಕೆ ಅಥವಾ ನಿರ್ಧರಿಸುವುದಕ್ಕೆ ಅನ್ವಯವಾಗತಕ್ಕುದು.

**14. ನ್ಯಾಯಪೀಠಗಳೊಳಗೆ ವ್ಯವಹಾರದ ಹಂಚಿಕೆ.-** (1) ಯಾವುವೇ ನ್ಯಾಯಪೀಠಗಳನ್ನು ರಚಿಸಿದಲ್ಲಿ, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ, ನ್ಯಾಯ ಪೀಠಗಳೊಳಗೆ ಕ್ಲೇಮುಗಳ ನ್ಯಾಯಾಧಿಕರಣದ ವ್ಯವಹಾರವನ್ನು ಹಂಚಿಕೆ ಮಾಡುವ ಬಗ್ಗೆ ಏರ್ಪಾಟು ಮಾಡಬಹುದು ಮತ್ತು ಪ್ರತಿಯೊಂದು ನ್ಯಾಯಪೀಠವು ವ್ಯವಹರಿಸಬಹುದಾದಂಥ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು.

(2) ಯಾವುದೇ ವಿಷಯವು ಒಂದು ನ್ಯಾಯಪೀಠಕ್ಕೆ ಹಂಚಿಕೆಯಾದ ವ್ಯವಹಾರದ ವ್ಯಾಪ್ತಿಯೊಳಗೆ ಬರುತ್ತದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆಗ ಅಧ್ಯಕ್ಷರ ತೀರ್ಮಾನವು ಅಂತಿಮವಾಗತಕ್ಕುದು.

**ವಿವರಣೆ:-** ಸಂದೇಹಗಳ ನಿವಾರಣೆಗಾಗಿ, "ವಿಷಯಗಳು" ಎಂಬ ಪದಾವಳಿಯು 20ನೇ ಪ್ರಕರಣದ ಮೇರೆಗಿನ ಅರ್ಜಿಯನ್ನು ಒಳಗೊಳ್ಳುತ್ತದೆಂದು ಈ ಮೂಲಕ ಘೋಷಿಸಲಾಗಿದೆ.

**15. ಅಧಿಕಾರ ವ್ಯಾಪ್ತಿಯ ಪ್ರತಿಷೇಧ.-** ಗೊತ್ತುಪಡಿಸಲಾದ ದಿನದಂದು ಮತ್ತು ಆ ದಿನದಿಂದ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು, 13ನೇ ಪ್ರಕರಣದ (1)ನೇ ಮತ್ತು (1ಎ) ಉಪ-ಪ್ರಕರಣಗಳಲ್ಲಿ ಉಲ್ಲೇಖಿಸಲಾದ ವಿಷಯಗಳ ಸಂಬಂಧದಲ್ಲಿ ಯಾವುದೇ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಅಥವಾ ಪ್ರಾಧಿಕಾರವನ್ನು ಹೊಂದಿರತಕ್ಕುದಲ್ಲ, ಅಥವಾ ಅದನ್ನು ಚಲಾಯಿಸಲು ಹಕ್ಕುಳ್ಳದ್ದಾಗಿರತಕ್ಕುದಲ್ಲ.

## ಅಧ್ಯಾಯ-IV

## ಪ್ರಕ್ರಿಯೆ

**16. ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಅರ್ಜಿ.-** (1) 13ನೇ ಪ್ರಕರಣದ (1)ನೇ ಉಪ-ಪ್ರಕರಣ ಅಥವಾ (1ಎ) ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಪರಿಹಾರವನ್ನು ಕೋರುವ ವ್ಯಕ್ತಿಯು ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅರ್ಜಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕುದು ಮತ್ತು ಅಂಥ ದಸ್ತಾವೇಜುಗಳು ಅಥವಾ ಇತರ ಸಾಕ್ಷ್ಯ ಮತ್ತು ಅಂಥ ಅರ್ಜಿಯನ್ನು ದಾಖಲು ಮಾಡುವುದಕ್ಕೆ ಸಂಬಂಧಪಟ್ಟ ಫೀಜು ಮತ್ತು ಆದೇಶಿಕೆಗಳ ಜಾರಿ ಅಥವಾ ಅಮಲ್ಜಾರಿಗಾಗಿ ಅಂಥ ಇತರ ಫೀಜು - ಇವುಗಳು ಆ ಅರ್ಜಿಯ ಜೊತೆಗೆ ಇರತಕ್ಕುದು:

ಪರಂತು, 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (i)ನೇ ಉಪಖಂಡದ ಅಥವಾ ಸಂದರ್ಭಾನುಸಾರ (1ಎ) ಉಪ ಪ್ರಕರಣದ ಮೇರೆಗಿನ ಅರ್ಜಿಗೆ ಸಂಬಂಧಿಸಿದಂತೆ ಅಂಥ ಯಾವುದೇ ಫೀಜನ್ನು ಸಂದಾಯ ಮಾಡತಕ್ಕುದಲ್ಲ.

**17. ಕಾಲ ಪರಿಮಿತಿ.-** (1) ಕ್ಲೇಮುಗಳ ನ್ಯಾಯಾಧಿಕರಣವು,-

(ಎ) 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (i)ನೇ ಉಪಖಂಡದ ಮೇರೆಗೆ ಯಾವುದೇ ಕ್ಲೇಮಿನ ಅರ್ಜಿಯನ್ನು ಸಂಬಂಧಪಟ್ಟ ಸರಕುಗಳನ್ನು ರೈಲ್ವೆಯ ಮೂಲಕ

ಸಾಗಿಸಲು ರೈಲ್ವೆ ಆಡಳಿತಕ್ಕೆ ವಹಿಸಲಾಗಿದ್ದ ದಿನಾಂಕದಿಂದ ಮೂರು ವರ್ಷಗಳೊಳಗೆ ಸಲ್ಲಿಸಿದ ಹೊರತು ಆ ಅರ್ಜಿಯನ್ನು;

(ಬಿ) 13ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ (ii)ನೇ ಉಪಖಂಡದ ಅಥವಾ ಸಂದರ್ಭಾನುಸಾರ (1ಎ) ಉಪ ಪ್ರಕರಣದ ಮೇರೆಗೆ ಯಾವುದೇ ಕ್ಲೇಮಿನ ಅರ್ಜಿಯನ್ನು ಆ ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ಸಲ್ಲಿಸಿದ ಹೊರತು ಆ ಅರ್ಜಿಯನ್ನು;

(ಸಿ) 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಕ್ಲೇಮಿನ ಅರ್ಜಿಯನ್ನು ರೈಲ್ವೆ ಆಡಳಿತಕ್ಕೆ ಆ ದರ ಅಥವಾ ಸಾಗಣೆ ಬಾಡಿಗೆಯನ್ನು ಸಂದಾಯ ಮಾಡಿದ ದಿನಾಂಕದಿಂದ ಮೂರು ವರ್ಷಗಳೊಳಗೆ ಸಲ್ಲಿಸಿದ ಹೊರತು ಆ ಅರ್ಜಿಯನ್ನು

-ಅಂಗೀಕರಿಸತಕ್ಕುದಲ್ಲ:

ಪರಂತು, 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (i)ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಕ್ಲೇಮಿನ ಅರ್ಜಿಯನ್ನು ರೈಲ್ವೆ ಅಧಿನಿಯಮದ 78ಬಿ ಪ್ರಕರಣದ ಮೇರೆಗೆ ಕ್ಲೇಮಿನ ಮಾಹಿತಿಯನ್ನು ನೀಡಿದ ದಿನಾಂಕದ ತರುವಾಯದ ಮೂರು ತಿಂಗಳುಗಳು ಮುಕ್ತಾಯಗೊಳ್ಳುವವರೆಗೆ ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅರ್ಜಿದಾರನು ಅಂಥ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದಿರಲು ತನಗೆ ಸಾಕಷ್ಟು ಕಾರಣ ಇತ್ತೆಂದು ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಮನವರಿಕೆ ಮಾಡಿಕೊಟ್ಟರೆ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯ ತರುವಾಯವೂ, ಅರ್ಜಿಯನ್ನು ಪುರಸ್ಕರಿಸಬಹುದು.

**18. ಕ್ಲೇಮುಗಳ ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು.-** (1) ಕ್ಲೇಮುಗಳ ನ್ಯಾಯಾಧಿಕರಣವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ನಿರೂಪಿಸಲಾದ ಪ್ರಕ್ರಿಯೆಗೆ ಬದ್ಧವಾಗಿರತಕ್ಕುದಲ್ಲ. ಆದರೆ ಸ್ವಾಭಾವಿಕ ನ್ಯಾಯ ತತ್ವಗಳ ಮೂಲಕ ಮಾರ್ಗದರ್ಶನ ಪಡೆಯತಕ್ಕುದು ಮತ್ತು ಈ ಅಧಿನಿಯಮದ ಮತ್ತು ಯಾವುವೇ ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು, ಕ್ಲೇಮುಗಳ ನ್ಯಾಯಾಧಿಕರಣವು ಅದರ ವಿಚಾರಣಾ ಸ್ಥಳಗಳನ್ನು ಮತ್ತು ಸಮಯವನ್ನು ನಿಗದಿಪಡಿಸುವುದು ಸೇರಿದಂತೆ ತನ್ನದೇ ಪ್ರಕ್ರಿಯೆಯನ್ನು ವಿನಿಯಮಿಸಲು ಅಧಿಕಾರಗಳನ್ನು ಹೊಂದಿರತಕ್ಕುದು.

(2) ಕ್ಲೇಮುಗಳ ನ್ಯಾಯಾಧಿಕರಣವು ಪ್ರತಿಯೊಂದು ಅರ್ಜಿಯನ್ನು ಸಾಧ್ಯವಾದಷ್ಟು ತ್ವರಿತವಾಗಿ ತೀರ್ಮಾನಿಸತಕ್ಕುದು ಮತ್ತು ಸಾಮಾನ್ಯವಾಗಿ ಪ್ರತಿಯೊಂದು ಅರ್ಜಿಯನ್ನು, ದಸ್ತಾವೇಜುಗಳು, ಲಿಖಿತ ಮನವಿಗಳು ಮತ್ತು ಶಪಥ ಪತ್ರಗಳನ್ನು ಪರಿಶೀಲಿಸಿದ ಮೇಲೆ ಮಂಡಿಸಬಹುದಾದಂಥ ಮೌಖಿಕ ವಾದಗಳನ್ನು ಸುನಾವಣೆ ಮಾಡಿದ ತರುವಾಯ ತೀರ್ಮಾನಿಸತಕ್ಕುದು.

(3) ಕ್ಲೇಮುಗಳ ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ದಾವೆಯ ಅಧಿವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:-

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳ ಕಂಡುಹಿಡಿಯುವಿಕೆ ಮತ್ತು ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸುವುದು;

(ಸಿ) ಶಪಥಪತ್ರಗಳ ಮೇಲೆ ಸಾಕ್ಷ್ಯಗಳನ್ನು ಸ್ವೀಕರಿಸುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 123ನೇ ಮತ್ತು 124ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ದಸ್ತಾವೇಜು ಅಥವಾ ಅಂಥ ದಾಖಲೆ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಜಿ) ತಪ್ಪಿತಕ್ಕಾಗಿ ಅರ್ಜಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಹೆಚ್) ತಪ್ಪಿತಕ್ಕಾಗಿ ಯಾವುದೇ ಅರ್ಜಿಯನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಅದು ಏಕಪಕ್ಷೀಯವಾಗಿ ಹೊರಡಿಸಿದ ಯಾವುದೇ ಆದೇಶವನ್ನು ತಳ್ಳಿಹಾಕುವುದು;

(ಐ) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**19. ಕಾನೂನು ಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು ಮತ್ತು ಪ್ರಸ್ತುತಪಡಿಸುವ ಅಧಿಕಾರಿಗಳು.–** (1) ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ತನ್ನ ಪ್ರಕರಣವನ್ನು ಪ್ರಸ್ತುತಪಡಿಸಲು ಖುದ್ದಾಗಿ ಹಾಜರಾಗಬಹುದು ಅಥವಾ ಅದಕ್ಕಾಗಿ ತನ್ನ ಇಚ್ಛಾನುಸಾರ ಒಬ್ಬ ನ್ಯಾಯವಾದಿಯ ಸಹಾಯವನ್ನು ತೆಗೆದುಕೊಳ್ಳಬಹುದು.

(2) ರೈಲ್ವೆ ಆಡಳಿತವು ಒಬ್ಬ ಅಥವಾ ಅದಕ್ಕೂ ಹೆಚ್ಚು ನ್ಯಾಯವಾದಿಗಳನ್ನು ಅಥವಾ ತನ್ನ ಅಧಿಕಾರಿಗಳ ಪೈಕಿ ಯಾರನ್ನಾದರೂ ಪ್ರಸ್ತುತಪಡಿಸುವ ಅಧಿಕಾರಿಗಳೆಂದು ಕಾರ್ಯನಿರ್ವಹಿಸಲು ಅಧಿಕೃತಗೊಳಿಸಬಹುದು ಮತ್ತು ಅದು ಹಾಗೆ ಅಧಿಕೃತಗೊಳಿಸಿದ ಪ್ರತಿಯೊಬ್ಬ ವ್ಯಕ್ತಿಯು, ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ಯಾವುದೇ ಅರ್ಜಿಗೆ ಸಂಬಂಧಿಸಿದಂತೆ ಅದರ ಪ್ರಕರಣವನ್ನು ಪ್ರಸ್ತುತಪಡಿಸಬಹುದು.

**20. ಒಂದು ನ್ಯಾಯಪೀಠದಿಂದ ಇನ್ನೊಂದು ನ್ಯಾಯಪೀಠಕ್ಕೆ ಪ್ರಕರಣಗಳನ್ನು ವರ್ಗಾಯಿಸಲು ಅಧ್ಯಕ್ಷನ ಅಧಿಕಾರ.–** ಪಕ್ಷಕಾರರ ಪೈಕಿ ಯಾರಾದರೂ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ಆ ಪಕ್ಷಕಾರರಿಗೆ ನೋಟೀಸು ಕೊಟ್ಟ ತರುವಾಯ ಮತ್ತು ಸುನಾವಣೆ ಮಾಡಬೇಕೆಂದು ಅಧ್ಯಕ್ಷನು ಇಚ್ಛಿಸಬಹುದಾದಂಥವರನ್ನು ಸುನಾವಣೆ ಮಾಡಿದ ತರುವಾಯ ಅಥವಾ ಅಂಥ ಯಾವುದೇ ನೋಟೀಸಿಲ್ಲದೆಯೇ ಅಧ್ಯಕ್ಷನು ತಾನಾಗಿಯೇ ಒಂದು ನ್ಯಾಯ ಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣವನ್ನು ವಿಲೆಗಾಗಿ ಯಾವುದೇ ಇತರ ನ್ಯಾಯಪೀಠಕ್ಕೆ ವರ್ಗಾಯಿಸಬಹುದು.

**21. ಬಹುಮತದ ಮೂಲಕ ತೀರ್ಮಾನ.–** ಯಾವುದೇ ವಿಷಯದ ಬಗ್ಗೆ ನ್ಯಾಯಪೀಠದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾದರೆ, ಅವರು ಭಿನ್ನಾಭಿಪ್ರಾಯ ಪಡುವ ವಿಷಯ ಅಥವಾ ವಿಷಯಗಳನ್ನು ನಿರೂಪಿಸತಕ್ಕುದು ಮತ್ತು ಅದನ್ನು ಅಧ್ಯಕ್ಷನಿಗೆ ಒಪ್ಪಿಸತಕ್ಕುದು. ಅವನು ಆ ವಿಷಯ ಅಥವಾ ವಿಷಯಗಳನ್ನು ಖುದ್ದಾಗಿ ಸುನಾವಣೆ ಮಾಡತಕ್ಕುದು ಅಥವಾ ಇತರ ಸದಸ್ಯರ ಪೈಕಿ ಒಬ್ಬನು ಅಥವಾ ಹೆಚ್ಚು ಮಂದಿ ಅಂಥ ವಿಷಯ ಅಥವಾ ವಿಷಯಗಳನ್ನು ಸುನಾವಣೆ

ಮಾಡುವುದಕ್ಕಾಗಿ ಆ ಪ್ರಕರಣವನ್ನು ಅವರಿಗೆ ಕಳಿಸಿಕೊಡತಕ್ಕುದು ಮತ್ತು ಮೊದಲು ಆ ಪ್ರಕರಣವನ್ನು ಸುನಾವಣೆ ಮಾಡಿದವರು ಸೇರಿದಂತೆ ಅದನ್ನು ಸುನಾವಣೆ ಮಾಡಿರುವ ಸದಸ್ಯರ ಬಹುಮತದ ಅಭಿಪ್ರಾಯಕ್ಕನುಸಾರವಾಗಿ ಅಂಥ ವಿಷಯ ಅಥವಾ ವಿಷಯಗಳನ್ನು ತೀರ್ಮಾನಿಸತಕ್ಕುದು.

**22. ಕ್ಲೇಮುಗಳ ನ್ಯಾಯಾಧಿಕರಣದ ಆದೇಶಗಳ ಅಮಲ್ಜಾರಿ.-** (1) ಈ ಅಧಿನಿಯಮದ ಮೇರೆಗೆ ಕ್ಲೇಮುಗಳ ನ್ಯಾಯಾಧಿಕರಣವು ಮಾಡಿರುವ ಆದೇಶವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಕ್ಲೇಮುಗಳ ನ್ಯಾಯಾಧಿಕರಣವು ಅಮಲ್ಜಾರಿಗೊಳಿಸುವಂತೆ ಮಾಡತಕ್ಕುದು ಮತ್ತು ಈ ಉದ್ದೇಶಕ್ಕಾಗಿ ಕ್ಲೇಮುಗಳ ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ಕ್ಲೇಮುಗಳ ನ್ಯಾಯಾಧಿಕರಣವು, ಸ್ಥಳೀಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ತಾನು ಹೊರಡಿಸಿದ ಯಾವುದೇ ಆದೇಶವನ್ನು ಕಳುಹಿಸಬಹುದು ಮತ್ತು ಅಂಥ ಸಿವಿಲ್ ನ್ಯಾಯಾಲಯವು, ಆ ಆದೇಶವು ತಾನು ಮಾಡಿದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಅದನ್ನು ಅಮಲ್ಜಾರಿಗೊಳಿಸತಕ್ಕುದು.

## ಅಧ್ಯಾಯ-V

### ಅಪೀಲುಗಳು

**23. ಅಪೀಲುಗಳು.-** (1) (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು, ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಕ್ಲೇಮುಗಳ ನ್ಯಾಯಾಧಿಕರಣದ ವಾದಕಾಲೀನ ಆದೇಶವಲ್ಲದ ಪ್ರತಿಯೊಂದು ಆದೇಶದ ಬಗ್ಗೆ ಅಪೀಲನ್ನು ಆ ನ್ಯಾಯಪೀಠವು ಇರುವಂಥ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲು ಅವಕಾಶವಿರತಕ್ಕುದು.

(2) ಕ್ಲೇಮುಗಳ ನ್ಯಾಯಾಧಿಕರಣವು ಪಕ್ಷಕಾರರ ಸಮ್ಮತಿಯಿಂದ ಹೊರಡಿಸಿದ ಆದೇಶದ ಬಗ್ಗೆ ಯಾವುದೇ ಅಪೀಲನ್ನು ಸಲ್ಲಿಸಲು ಅವಕಾಶ ಇರತಕ್ಕುದಲ್ಲ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಯಾವ ಆದೇಶದ ವಿರುದ್ಧ ಆ ಅಪೀಲನ್ನು ಸಲ್ಲಿಸಬೇಕಾಗಿದೆಯೋ ಆ ಆದೇಶದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕುದು.

## ಅಧ್ಯಾಯ-VI

### ಸಂಕೀರ್ಣ

**24. ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆ.-** (1) ಗೊತ್ತುಪಡಿಸಲಾದ ದಿನಕ್ಕೆ ಅಥವಾ ಸಂದರ್ಭಾನುಸಾರ, 13ನೇ ಪ್ರಕರಣದ (1ಎ) ಉಪ-ಪ್ರಕರಣದ ಉಪಬಂಧಗಳ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಲಯ, ಕ್ಲೇಮುಗಳ ಕಮೀಷನರು ಅಥವಾ ಇತರ ಪ್ರಾಧಿಕಾರದ ಮುಂದೆ ಯಾವ ದಾವೆ, ಕ್ಲೇಮು ಅಥವಾ (ಅಪೀಲಲ್ಲದ ಇತರ) ನ್ಯಾಯಿಕ ವ್ಯವಹರಣೆಯು ಇತ್ಯರ್ಥದಲ್ಲಿದೆಯೋ ಮತ್ತು ಯಾವ ದಾವೆ, ಕ್ಲೇಮು ಅಥವಾ ವ್ಯವಹರಣೆಗೆ ಆಧಾರವಾಗಿರುವ ವ್ಯಾಜ್ಯ ಕಾರಣವು ಗೊತ್ತುಪಡಿಸಲಾದ ದಿನದ ಅಥವಾ, ಸಂದರ್ಭಾನುಸಾರ, 13ನೇ ಪ್ರಕರಣದ (1ಎ) ಉಪ ಪ್ರಕರಣದ ಉಪಬಂಧಗಳ ಪ್ರಾರಂಭದ ದಿನಾಂಕದ ತರುವಾಯ ಉದ್ಭವಿಸಿದ್ದಿದ್ದರೆ ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗೆ ಬರಬಹುದಾಗಿದ್ದಂಥದಾಗಿದೆಯೋ ಆ ಪ್ರತಿಯೊಂದು ದಾವೆ, ಕ್ಲೇಮು ಅಥವಾ

ಇತರ ನ್ಯಾಯಿಕ ವ್ಯವಹರಣೆಯು ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಆ ದಿನದಂದು ಅಥವಾ, ಸಂದರ್ಭಾನುಸಾರ, ದಿನಾಂಕದಂದು ವರ್ಗಾವಣೆಗೊಳ್ಳತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ನ್ಯಾಯಾಲಯದಿಂದ, ಕ್ಲೇಮುಗಳ ಕಮಿಷನರು ಅಥವಾ ಇತರ ಪ್ರಾಧಿಕಾರದಿಂದ ಕ್ಲೇಮು ನ್ಯಾಯಾಧಿಕರಣಕ್ಕೆ ಯಾವುದೇ ದಾವೆ, ಕ್ಲೇಮು ಅಥವಾ ಇತರ ಕಾನೂನು ವ್ಯವಹರಣೆಯು ವರ್ಗಾವಣೆಯಾಗಿರುವಲ್ಲಿ-

(ಎ) ಆ ನ್ಯಾಯಾಲಯವು, ಕ್ಲೇಮುಗಳ ಕಮೀಷನರು ಅಥವಾ ಇತರ ಪ್ರಾಧಿಕಾರವು ಅಂಥ ವರ್ಗಾವಣೆಯ ತರುವಾಯ ಸಾಧ್ಯವಾದಷ್ಟು ಬೇಗನೆ ಅಂಥ ದಾವೆ, ಕ್ಲೇಮು ಅಥವಾ ಇತರ ಕಾನೂನು ವ್ಯವರಣೆಯ ದಾಖಲೆಗಳನ್ನು ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕುದು;

(ಬಿ) ಕ್ಲೇಮುಗಳ ನ್ಯಾಯಾಧಿಕರಣವು, ಅಂಥ ದಾಖಲೆಗಳನ್ನು ಸ್ವೀಕರಿಸಿದ ಮೇಲೆ, ಅಂಥ ದಾವೆ, ಕ್ಲೇಮು ಅಥವಾ ಇತರ ಕಾನೂನು ವ್ಯವಹರಣೆಯ ಬಗ್ಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅರ್ಜಿಯಂತಹದೇ ರೀತಿಯಲ್ಲಿ ಕ್ಲೇಮುಗಳ ನ್ಯಾಯಾಧಿಕರಣವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅಂಥ ವರ್ಗಾವಣೆಗೆ ಮುಂಚೆ ಅದು ತಲುಪಿದ್ದಂಥ ಹಂತದಿಂದ ಅಥವಾ ಯಾವುದೇ ಇನ್ನೂ ಮುಂಚಿನ ಹಂತದಿಂದ ಅಥವಾ ಹೊಸದಾಗಿ ಕ್ರಮ ಜರುಗಿಸಬಹುದು.

**25. ಕ್ಲೇಮು ನ್ಯಾಯಾಧಿಕರಣದ ಮುಂದಿರುವ ಕಾನೂನು ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು.-** ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ಇರುವ ಎಲ್ಲ ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ (1860ರ 47) 193ನೆಯ, 219ನೆಯ ಮತ್ತು 228ನೆಯ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕುದು.

**26. ಕ್ಲೇಮುಗಳ ನ್ಯಾಯಾಧಿಕರಣದ ಸದಸ್ಯರು ಮತ್ತು ಸಿಬ್ಬಂದಿಯು ಲೋಕ ನೌಕರರಾಗಿರುವುದು.-** ಕ್ಲೇಮುಗಳ ನ್ಯಾಯಾಧಿಕರಣದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರು ಹಾಗೂ ಅಧಿಕಾರಿಗಳು ಮತ್ತು ಇತರ ನೌಕರರನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕುದು.

**27. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶಕ್ಕನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ವಿರುದ್ಧ ಅಥವಾ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯ ಅಥವಾ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶ ಇರತಕ್ಕುದಲ್ಲ.

**28. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು.-** ಈ ಅಧಿನಿಯಮದ ಉಪಬಂಧಗಳು, ತತ್‌ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವಲ್ಲದ ಯಾವುದೇ ಕಾನೂನಿನ ಕಾರಣದಿಂದಾಗಿ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದರೂ, ಪರಿಣಾಮ ಹೊಂದಿರತಕ್ಕುದು.

**29. ತೊಂದರೆಗಳ ನಿವಾರಣಾಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿತ ಆದೇಶದ ಮೂಲಕ ಆ ತೊಂದರೆ ನಿವಾರಣೆಗಾಗಿ ತನಗೆ ಅವಶ್ಯಕವೆಂದು ಅಥವಾ

ವಿಹಿತವೆಂದು ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಗೊತ್ತುಪಡಿಸಲಾದ ದಿನದಿಂದ ಮೂರು ವರ್ಷಗಳ ಅವಧಿಯು ಮುಗಿದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕುದು.

**30. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯನ ದುರ್ವರ್ತನೆಯ ಅಥವಾ ಅಸಮರ್ಥತೆಯ ತನಿಖೆಗಾಗಿ 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಪ್ರಕ್ರಿಯೆ;

(ಬಿ) 9ನೇ ಪ್ರಕರಣದ ಮೇರೆಗೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು (ನಿವೃತ್ತಿ ವೇತನ, ಉಪದಾನ ಮತ್ತು ಇತರ ನಿವೃತ್ತಿ ಪ್ರಯೋಜನಗಳು ಸೇರಿದಂತೆ) ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಸಿ) 11ನೇ ಪ್ರಕರಣದ ಮೇರೆಗೆ ಅಧ್ಯಕ್ಷನು ನ್ಯಾಯಪೀಠಗಳ ಮೇಲೆ ಚಲಾಯಿಸಬಹುದಾದ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳು;

(ಡಿ) 12ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕ್ಲೇಮುಗಳ ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ವೇತನಗಳು ಮತ್ತು ಭತ್ಯೆಗಳು ಮತ್ತು ಸೇವಾ ಷರತ್ತುಗಳು;

(ಇ) 16ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯ ನಮೂನೆ, ಅಂಥ ಅರ್ಜಿಯ ಜೊತೆಗೆ ಇರಬೇಕಾದ ದಸ್ತಾವೇಜುಗಳು ಮತ್ತು ಇತರ ಸಾಕ್ಷ್ಯ ಹಾಗೂ ಅಂಥ ಅರ್ಜಿಯನ್ನು ದಾಖಲು ಮಾಡುವ ಬಗ್ಗೆ ಫೀಜು ಮತ್ತು ಆದೇಶಿಕೆಗಳ ಜಾರಿ ಅಥವಾ ಅಮಲ್ಜಾರಿಗಾಗಿ ಫೀಜು;

(ಎಫ್) 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕ್ಲೇಮುಗಳ ನ್ಯಾಯಾಧಿಕರಣವು ಯಾವ ನಿಯಮಗಳಿಗೆ ಒಳಪಟ್ಟು ತನ್ನದೇ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕುದೋ ಆ ನಿಯಮಗಳು ಮತ್ತು ಆ ಪ್ರಕರಣದ 3ನೆಯ ಉಪ-ಪ್ರಕರಣದ (ಐ) ಖಂಡದ ಮೇರೆಗೆ ಕ್ಲೇಮುಗಳ ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದಾದ ಹೆಚ್ಚಿನ ವಿಷಯಗಳು.

(ಜಿ) ನಿಯಮಿಸಬೇಕಾದ ಅಥವಾ ನೇಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ

ಇಡತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**30ಎ. ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ಅಧಿಕಾರ.-** 30ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗಿನ ನಿಯಮಗಳ ರಚನಾಧಿಕಾರವು, ಈ ಅಧಿನಿಯಮವು ರಾಷ್ಟ್ರಪತಿಯವರ ಸಮ್ಮತಿ ಪಡೆದ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ, ಅಂಥ ನಿಯಮಗಳನ್ನು ಅಥವಾ ಅವುಗಳ ಪೈಕಿ ಯಾವುದೇ ನಿಯಮವನ್ನು ರಚಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು ಆದರೆ, ಅಂಥ ನಿಯಮವು ಯಾವ ವ್ಯಕ್ತಿಗೆ ಅನ್ವಯವಾಗಬಹುದಾಗಿದೆಯೋ ಆ ಯಾರೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮವುಂಟು ಮಾಡುವಂಥ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೆ ಕೊಡತಕ್ಕದ್ದಲ್ಲ.

* * * * *